No.MAG(3)/NPP/98/2023-2024
No.MAG(3)/NPP/99/2023-2024
ಸ್ಥಾಪನೆ : ೧೯೭೯



# ಹೊಂಗನಸು



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ
ಹೊಂಗನಸು–೧೧೧

ಸಂಪುಟ: ೧೨ ಸಂಚಿಕೆ: ೧೧
Volume: 12 Issue: 11
ಫೆಬ್ರವರಿ ೨೦೨೫
February 2025
ಪುಟಗಳು-೮
Pages-8
ವಾರ್ಷಿಕ ಚಂದಾ ರೂ.೨೦/-
Annual Subscription Rs.20/-
ಶ್ರೀ ಕ್ರೋಧಿ ಸಂವತ್ಸರ
ಪುಷ್ಯ-ಮಾಘ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಪಿ.ವಿ. ನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂಯೋಜನಾಧಿಕಾರಿಗಳು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಪ್ರಶಸ್ತಿ ಪುರಸ್ಕೃತರು - ಪ್ರಸಿದ್ಧ ಪುರುಷರು

ಭಾರತದ ಯಾವುದೇ ಭಾಷಾ ಸಾಹಿತ್ಯದ ಇತಿಹಾಸವನ್ನು ನೋಡಿದಾಗ ನಮಗೆ ತಿಳಿಯುವ ಸೂಕ್ಷ್ಮ ಸಂಗತಿ ಎಂದರೆ ಹೆಸರು ಮಾಡಿರುವ ಹಲವು ಸಾಹಿತಿಗಳಲ್ಲಿ ಎರಡು ಪ್ರಕಾರವನ್ನು ಕಾಣಬಹುದು. ಒಂದು ಪ್ರಕಾರ– ತಮ್ಮ ಉತ್ಕೃಷ್ಟ ಸಾಹಿತ್ಯದಿಂದ ದೇಶದ ಅನೇಕ ಉನ್ನತ ಪ್ರಶಸ್ತಿಗಳನ್ನು ಗಳಿಸಿದ್ದಾಗ್ಯೂ, ಜನಸಾಮಾನ್ಯರಿಗೆ ಅವರ ಸಾಹಿತ್ಯದ ಅರಿವು ಇಲ್ಲದಿರುವುದು ಮತ್ತು ಅದು ಸಾಮಾನ್ಯ ಜನರಿಗೆ ಸ್ವಲ್ಪ ಕ್ಲಿಷ್ಟವಾದದ್ದು, ಕೇವಲ ಸಾಹಿತ್ಯಲೋಕದ ಆಸಕ್ತರಿಗಷ್ಟೇ ತಿಳಿದಿದ್ದು. ಇನ್ನೊಂದು ಬಗೆ– ತಮ್ಮ ಸಾಹಿತ್ಯದಿಂದ ಪ್ರಶಸ್ತಿಗಳಿಗಿಂತ ಪ್ರಸಿದ್ಧಿಯನ್ನು ಗಳಿಸಿ ಜನಸಾಮಾನ್ಯರ ಹೃದಯವನ್ನು ಗೆದ್ದಿರುವುದು. ಈ ಪ್ರವೃತ್ತಿಯನ್ನು ನಾವು ಕನ್ನಡ ಸಾಹಿತ್ಯದಲ್ಲೂ ಕಾಣಬಹುದು. ಸಂತೋಷದ ವಿಷಯವೆಂದರೆ, ಈ ಎರಡು ಪ್ರಕಾರದವರಿಂದ ಸಾಹಿತ್ಯ ಸಮೃದ್ಧಿಯಾಗಿರುವುದಂತೂ ನಿಜ. ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಬ್ಬರಿಗೊಬ್ಬರು ಸಾಹಿತ್ಯ ಪೋಷಣೆಯಲ್ಲಿ ಪೂರಕ.

ಕನ್ನಡ ಸಾಹಿತ್ಯವನ್ನೇ ನೋಡೋಣ. ಕನ್ನಡಿಗರು ಯಾವುದರಲ್ಲೂ ಕಡಿಮೆಯಿಲ್ಲ ಅನ್ನುವುದಕ್ಕೆ ಎಂಟು ದಿಗ್ಗಜರು ಜ್ಞಾನಪೀಠ ಪ್ರಶಸ್ತಿ ಪಡೆದಿರುವುದೇ ಪುರಾವೆ. ಆದರೆ ಇವರೆಲ್ಲರ ಸಾಹಿತ್ಯ ಜನಪ್ರಿಯವಾಗಿ ಜನರನ್ನು ರಂಜಿಸಿ ಅವರ ಮನಃಪಟಲದಲ್ಲಿ ನಿಂತಿದೆ ಎನ್ನಲಾಗದು. ಇದರಲ್ಲಿ ಕೆಲವರು ಜನಪ್ರಿಯರಾಗಿ ಇರುವುದೂ ಉಂಟು. ಈ ಪ್ರಶಸ್ತಿ ವಿಜೇತರು ಸಾಹಿತ್ಯಲೋಕದ ದಿಗ್ಗಜರು ಅನ್ನುವುದರಲ್ಲಿ ಸ್ವಲ್ಪವೂ ಅನುಮಾನವಿಲ್ಲ.

ಈ ಮಟ್ಟದ ಪ್ರಶಸ್ತಿ ಪಡೆಯದಿದ್ದರೂ ತಮ್ಮ ಸಾಹಿತ್ಯದಿಂದ ಬಹುಜನಪ್ರಿಯರಾಗಿ ಅವರ ಮನದಲ್ಲಿ, ಹೃದಯದಲ್ಲಿ ನೆಲೆಸಿದ್ದರೆ, ಕೆಲವರಂತೂ ಎಲ್ಲಾ ವರ್ಗಗಳ ಜನರ ನಾಲಿಗೆಯಲ್ಲಿ ನಲಿದಾಡುತ್ತಿರುವುದು ಖಡಾ ಖಂಡಿತ. ಕಥೆ, ಕಾದಂಬರಿಗಳ ಮೂಲಕ, ಗೀತೆಗಳ ಮೂಲಕ, ನಕ್ಕು ನಗಿಸುವ ಹಾಸ್ಯ ಬರಹಗಳ ಮೂಲಕ, ಹೃದಯಪರಿವರ್ತನೆ ತರಬಹುದಾದಂತಹ ಭಾಷಣಗಳ ಮೂಲಕ, ವೈಚಾರಿಕ ಲೇಖನಗಳ ಮೂಲಕ, ವಚನ, ದಾಸ ಸಾಹಿತ್ಯಗಳ ಮೂಲಕ, ಜನಪದ ಹಾಡುಗಳ ಮೂಲಕ ಹೀಗೆ ಹಲವಾರು. ಇಂತಹ ಸಾಹಿತಿಗಳು ರಚಿಸಿದ ಸಾಹಿತ್ಯದ ಕೆಲವೇ ಪದಗಳನ್ನು ಹೇಳಿದರೆ ಸಾಕು ಜನಸಾಮಾನ್ಯರು 'ಥಟ್ಟಂತ' ಆ ಸಾಹಿತಿಯ ಹೆಸರನ್ನು ಹೇಳಿಬಿಡುತ್ತಾರೆ.

'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ರಚಿಸಿದ ಹುಯಿಲಗೋಳ ನಾರಾಯಣರಾಯರು ಅವರ ಇನ್ನಿತರ ಕನ್ನಡಾಭಿಮಾನಿ ಕಾರ್ಯಗಳಿಗಿಂತ ಈ ಗೀತೆ ಅಚ್ಚಳಿಯದೇ ಜನರನ್ನು ಈಗಲೂ ಮೆಚ್ಚಿಸುತ್ತದೆ. ಇದೇ ರೀತಿ, ಬಿ.ಎಂ.ಶ್ರೀ. ಅವರ 'ಅಶ್ವತ್ಥಾಮನ್' ನಾಟಕಕ್ಕಿಂತ 'ಕರುಣಾಳು ಬಾ ಬೆಳಕೆ' ಗೀತೆ ಕಿವಿಗೆ ಬಿದ್ದಾಕ್ಷಣ ಬಿ.ಎಂ.ಶ್ರೀ. ಅವರೇ ಕಣ್ಣಿನ ಮುಂದೆ ಬಂದು ನಿಂತಂತೆ ಆಗುತ್ತದೆ. ಕುವೆಂಪು ಅವರ 'ಭಾರತ ಜನನಿಯ ತನುಜಾತೆ', ನಿಸಾರ್ ಅಹ್ಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ' ಹೀಗೆ ಹಲವು ಸಾಹಿತ್ಯ ಕೊಡುಗೆಗಳು ನಿತ್ಯ ನೂತನವಾಗಿ ಕನ್ನಡ ತಳಮಟ್ಟದಲ್ಲಿ ಬೇರೂರಿದಂತೆ ಮಾಡಿವೆ.

ಶಿಶುಗೀತೆಗಳಾದ 'ಬಣ್ಣದ ತಗಡಿನ ತುತ್ತೂರಿ', 'ಗೋವಿನ ಕಥೆ'. 'ಕಿಂದರಿ ಜೋಗಿ', ಹಾಗೇ 'ಬ್ರಹ್ಮಾ ನಿಂಗೆ ಜೋಡಸ್ತೀನಿ ಹೆಂಡ ಮುಟ್ಟಿದ ಕೈನ' ಎಂಬ ವಿಡಂಬನಾತ್ಮಕ ಹಾಡು ಇವೆಲ್ಲ ಈಗಲೂ 'ಸೈ'

ಎನಿಸಿಕೊಂಡಿವೆ. ಈ ನಿಟ್ಟಿನಲ್ಲಿ ಚುಟುಕು ಸಾಮ್ರಾಜ್ಯ ಚಕ್ರವರ್ತಿ ದಿನಕರ ದೇಸಾಯಿ, ಇಂದಿನ ಸಹವರ್ತಿ ಡುಂಡಿರಾಜ್, ಕಾದಂಬರಿಗಾರ್ತಿ ತ್ರಿವೇಣಿ, ಕನ್ನಡವನ್ನು ಕಂಗೊಳಿಸುವಂತೆ ಮಾಡಿದ ನಿರೂಪಕಿ ಅಪರ್ಣ ಮುಂತಾದವರು ಅಂತಹ ಮೇರುಮಟ್ಟದ ಪ್ರಶಸ್ತಿ ಗಳಿಸದಿದ್ದರೂ ಪ್ರಸಿದ್ಧರಾಗಿ ಇಂದೂ ಜನಾನುರಾಗಿಗಳಾಗಿರುವುದು ಪುರಾವೆಯೇ. ಭಾಷೆ ಜಲವಿದ್ದಂತೆ, ಯಾವ ಆಕಾರದಲ್ಲಿಯೂ ಹೊಂದಿಕೊಳ್ಳುವ ಗುಣ ಅದಕ್ಕಿದೆ ಎಂದು ಎಲ್ಲರೂ ನಿರೂಪಿಸಿದ್ದಾರೆ. 'ಗಂಗಾಸ್ನಾನ, ತುಂಗಾ ಪಾನ' ಅನ್ನುವಂತೆ ಭಾಷೆಯ ಬಳಕೆ ಯಾವ ರೂಪದಲ್ಲಿದ್ದರೂ ಅದು ತನ್ನ ಉತ್ಕೃಷ್ಟತೆಯನ್ನು ಮೆರೆದೇ ಮೆರೆಯುತ್ತದೆ.

ಹೀಗೆ ಈ ಎರಡೂ ಪ್ರಕಾರದ ಸಾಹಿತಿಗಳು ಭಾಷೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೂ, ಜನಾನುರಾಗಿ ಮಾಡುವಲ್ಲಿ ತಮ್ಮದೇ ಆದ ಕಾಣಿಕೆಯನ್ನು ನೀಡಿ, ಭಾಷೆಗೆ ಭದ್ರ ಬುನಾದಿ ಹಾಕಿದ್ದಾರೆ. ಇಬ್ಬರೂ ಸಾಹಿತ್ಯವೆಂಬ ಬಂಡಿಯ ಎರಡು ಗಾಲಿಗಳು. ಎರಡೂ ಬಗೆಯವರು ಒಬ್ಬರೊಬ್ಬರಿಗೆ ಪೂರಕವಾಗಿ ನಿಲ್ಲಲಿ. ಒಬ್ಬರು ಸಾಹಿತ್ಯನ್ನು ಉಳಿಸಿದರೆ, ಮತ್ತೊಬ್ಬರು ಬೆಳೆಸಲಿ. ಒಬ್ಬರು ಕಂಬವನ್ನು ನೆಟ್ಟರೆ, ಮತ್ತೊಬ್ಬರು ಬಾವುಟ ಕಟ್ಟಿ ಹಾರಿಸಲಿ ಎಂದು ಹಾರೈಸೋಣ.

**ಡಾ. ಬೆಳವಾಡಿ ಕೃ. ಪ್ರಭಾಕರ್**
ಸಂಪಾದಕರು

## ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು

### ದಿನಾಂಕ : ೨೫-೧-೨೦೨೫ರ ಶನಿವಾರ ಬೆಳಗ್ಗೆ ೧೦.೩೦ ಗಂಟೆಗೆ

### ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರಿಗೆ 'ಶ್ರೀ ಸಾಹಿತ್ಯ ಪ್ರಶಸ್ತಿ'



ದಿನಾಂಕ ೨೫ ಜನವರಿ ಶನಿವಾರ ಮುಂಜಾನೆ ನಡೆದ ಕಾರ್ಯಕ್ರಮದಲ್ಲಿ ಪ್ರಖರ ಸ್ತ್ರೀ ಸಂವೇದನೆಯ ಲೇಖಕಿ ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರಿಗೆ ೨೦೨೫ರ 'ಶ್ರೀ ಸಾಹಿತ್ಯ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯನ್ನು ಬಿ.ಎಂ.ಶ್ರೀ. ಅವರ ಮೊಮ್ಮಗಳಾದ ಶ್ರೀಮತಿ ಕಮಲಿನಿ ಶಾ. ಬಾಲುರಾವ್ ಸ್ಥಾಪಿಸಿರುತ್ತಾರೆ. ಪ್ರತಿವರ್ಷ ಕನ್ನಡದ ಹಿರಿಯ, ಸಾಧಕ ಸಾಹಿತಿಯೊಬ್ಬರಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಒಂದು ಲಕ್ಷ ರೂಪಾಯಿಗಳು, ಅಭಿನಂದನಾ ಪತ್ರ ಮತ್ತು ಪ್ರಶಸ್ತಿ ಫಲಕಗಳೊಂದಿಗೆ ನೀಡಿ ಗೌರವಿಸಲಾಗುತ್ತದೆ.

ವಿದುಷಿ ಸುಮಲತಾ ಗಾಯನದ ಬಿ.ಎಂ.ಶ್ರೀ. ವಿರಚಿತ 'ವಸಂತ ಬಂದ ಋತುಗಳ ರಾಜ ತಾ ಬಂದ' ಸ್ವಾಗತ ಗೀತೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಸುಮಲತಾ 'ಕರುಣಾಳು ಬಾ ಬೆಳಕೆ' ಗೀತೆಯನ್ನೂ ಪ್ರಸ್ತುತ ಪಡಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಪ್ರಶಸ್ತಿಯ ಉಗಮ, ಬೆಳೆದುಬಂದಿರುವ ಹಾದಿ, ಇಲ್ಲಿಯವರೆಗೆ ಪ್ರಶಸ್ತಿ ಪಡೆದವರ ಹೆಸರುಗಳನ್ನು ತಿಳಿಸಿದರು. ವೇದಿಕೆಯ ಮೇಲಿರುವವರು ಹಾಗೂ ಸಭಿಕರಲ್ಲಿ ಅನೇಕರು ಚಿರಪರಿಚಿತರಿರುವವರೇ ಆಗಿದ್ದಾರೆ. ಇವರೆಲ್ಲರನ್ನೂ ಹಾರ್ದಿಕವಾಗಿ ಕಾರ್ಯಕ್ರಮಕ್ಕೆ ಸ್ವಾಗತಿಸುತ್ತೇನೆ. ಅನಿವಾರ್ಯ ಕಾರಣಗಳಿಂದ ಶ್ರೀಮತಿ ಕಮಲಿನಿ ಬಾಲುರಾವ್ ಅವರು ಪ್ರಶಸ್ತಿ ಸಮಾರಂಭಕ್ಕೆ ಬರುತ್ತಿಲ್ಲ ಎಂದರು.

ಶಾಂತರಾಜು ಅಭಿನಂದನಾ ಪತ್ರವನ್ನು ಓದಿದ ನಂತರ ನಾಡೋಜ ಡಾ. ಹಂಪನಾ ಅವರು ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರಿಗೆ ೨೦೨೫ನೇ ವರ್ಷದ 'ಶ್ರೀ ಸಾಹಿತ್ಯ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಇದರಲ್ಲಿ ಗೌರವಾಧ್ಯಕ್ಷ ಡಾ. ಪಿ.ವಿ.ನಾರಾಯಣ, ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಗೌ.ಕಾರ್ಯದರ್ಶಿ ಶಾಂತರಾಜು ಮತ್ತು ಗೌರವ ಕೋಶಾಧಿಕಾರಿ ಶ್ರೀ ಚಂದ್ರಶೇಖರ ನಾದೂರು ಕೈಜೋಡಿಸಿದರು.

**'ಪ್ರಶಸ್ತಿ ವಿಜೇತೆ ವೀಣಾ ಅವರಿಗೆ ಬಿ.ಎಂ.ಶ್ರೀ. ಪ್ರೇರಣೆ'**

ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಾ ಡಾ. ವೀಣಾ ಶಾಂತೇಶ್ವರ ಅವರು "ನನ್ನ ವೃತ್ತಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ, ಆದರೆ ಪ್ರವೃತ್ತಿ ಕನ್ನಡ ಲೇಖಕಿಯಾಗಿ, ಅದರಲ್ಲೂ ಸಮಾಜದಲ್ಲಿ ನಡೆಯುತ್ತಿರುವ ಭೇದ ಭಾವಗಳ ವಿರುದ್ಧ ಬರವಣಿಗೆಗಳ ಮೂಲಕ ಕಣ್ತೆರೆಸುವುದು ಆಗಿತ್ತು. ಧಾರವಾಡದಲ್ಲಿ ಬೆಳೆದ ಕಾರಣ ಕನ್ನಡ, ಮರಾಠಿ, ಹಿಂದಿ, ಅಲ್ಪ ಸ್ವಲ್ಪ ಸಂಸ್ಕೃತ ಭಾಷೆಗಳನ್ನು ಕಲಿತೆ. ಇದು ನನ್ನ ಬರಹಗಳಿಗೆ ಸಹಾಯಕವಾದುವು. ಇದಕ್ಕೆಲ್ಲಾ ಪ್ರೇರಣೆ ಆದವರು 'ಕನ್ನಡದ ಕಣ್ವ ಬಿ.ಎಂ.ಶ್ರೀ.' ಅವರೇ ಹಲವು ಭಾಷೆಗಳನ್ನು ಬಲ್ಲವರಾಗಿದ್ದರು. ಜೊತೆಗೆ ಇಂಗ್ಲಿಷ್ ಭಾಷಾ ಪ್ರಾಧ್ಯಾಪಕರಾಗಿದ್ದು ಕನ್ನಡದ ಉಳಿವಿಗಾಗಿ ಮತ್ತು ಬೆಳವಣಿಗೆಗಾಗಿ ಶ್ರಮಿಸಿದವರು. ನಾನು ಮನೆಯಲ್ಲೇ ಇದ್ದ ಅವರ 'ಇಂಗ್ಲಿಷ್ ಗೀತಗಳು' ಪುಸ್ತಕವನ್ನು ಬಿಡದೇ ಓದುತ್ತಿದ್ದೆ. ಅದರಲ್ಲಿದ್ದ 'ಅವಳ ಉಡಿಗೆ ಇವಳಿಗಿಟ್ಟು ನೋಡಬಯಸಿದೆ' ನನ್ನನ್ನು ಸೆರೆಹಿಡಿದಿತ್ತು. ಸಾಹಿತ್ಯ ರಚನೆಯ ಪ್ರಾರಂಭದಿಂದಲೂ ಸ್ತ್ರೀ ಶೋಷಣೆ ವಿರುದ್ಧದ ವಿಷಯಗಳನ್ನೇ ಆರಿಸಿ ಬರೆಯುತ್ತಿದ್ದೆ. ಅನೇಕ ಸಂಘಟನೆಗಳನ್ನೂ ಮಾಡಿದ್ದೇನೆ. ಎಲ್ಲಾ ಭಾಷೆಯ ಸಾಹಿತ್ಯವನ್ನು ಓದಿದಾಗ, ಕನ್ನಡವೂ ಸೇರಿದಂತೆ ಪ್ರಮುಖ ಲೇಖಕಿಯರು ಜಗತ್ತಿನಲ್ಲಿ ಇರುವುದನ್ನು ಕಾಣುತ್ತೇವೆ. ಇದೊಂದು ಹೆಮ್ಮೆಯ ವಿಷಯ. ಇಂದು ನನ್ನ ಪ್ರೇರಕರಾದ ಬಿ.ಎಂ.ಶ್ರೀ. ಅವರ 'ಶ್ರೀ ಸಾಹಿತ್ಯ ಪ್ರಶಸ್ತಿ' ಅದರಲ್ಲೂ ಅವರ ಹೆಸರಿನ ಪ್ರತಿಷ್ಠಾನದಲ್ಲೇ ಸ್ವೀಕರಿಸುತ್ತಿರುವುದು ಹೆಮ್ಮೆಯ ಮತ್ತು ಸಂತೋಷದ ವಿಷಯ. ಇದು ನನ್ನ ಮಹಿಳಾ ಸಮಾನತೆ ಹೋರಾಟಕ್ಕೂ ಸಿಕ್ಕ ಪ್ರತಿಫಲ

ಎಂದು ಸ್ವೀಕರಿಸುತ್ತೇನೆ. ನನ್ನನ್ನು ಗೌರವಿಸಿದ ನಿಮಗೆಲ್ಲಾ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ" ಎಂದರು.

**'ಇದು ಯುವ ಮತ್ತು ಲೇಖಕಿಯರ ಯುಗ'**

ಶ್ರೀ ಪ್ರಶಸ್ತಿ ಪ್ರದಾನ ಮಾಡಿದ ನಾಡೋಜ ಡಾ. ಹಂಪನಾ (ನಾಗರಾಜಯ್ಯ) ಅವರು ಮಾತನಾಡುತ್ತಾ ಇಂದಿನ ಪ್ರಶಸ್ತಿಗೆ ಅರ್ಹರಾಗಿ ಸ್ವೀಕರಿಸುತ್ತಿರುವ ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರು ಅಭಿನಂದನಾರ್ಹರು. ನಾನು ಅವರ ಬರವಣಿಗೆ ಮತ್ತು ಹೋರಾಟವನ್ನು ಅನೇಕ ವರ್ಷಗಳಿಂದ ನೋಡಿದ್ದೇನೆ. ಈಕೆ ಸಂಘಟನಾಚತುರೆ. ಅದರಲ್ಲೂ ಲೇಖಕಿಯರ ಹಾಗೂ ಮಹಿಳೆಯ ಸಮಾನತೆಯ ಬಗ್ಗೆ ಬಿಗುವಾದ ನಿಲುವನ್ನು ಹೊಂದಿದವರು. ಉತ್ತರ ಕರ್ನಾಟಕ ಭಾಗದಲ್ಲಿ ಲೇಖಕಿಯರನ್ನು ಪ್ರೋತ್ಸಾಹಿಸುವುದರಲ್ಲಿ ಮತ್ತು ಅವರಿಗೂ ಪುರುಷ ಸಮಾನವಾದ ವೇದಿಕೆಯ ನಿರ್ಮಾಣದಲ್ಲಿ ವೀಣಾ ಅವರ ಪಾತ್ರ ಮೆಚ್ಚುವಂತಾದ್ದು. ಅವರ ಅಧ್ಯಯನಶೀಲತೆ, ಅಧ್ಯಯನ ಕ್ಷಮತೆ, ಬರವಣಿಗೆಯ ವೈವಿಧ್ಯತೆ ನಾನು ಬಲ್ಲವನಾಗಿದ್ದೇನೆ. ಅವರದು ಸೃಜನಶೀಲ ಮತ್ತು ಪ್ರಗತಿಶೀಲ ಬರವಣಿಗೆ. ಅವರ ಕಥೆ, ಕಾದಂಬರಿಗಳಲ್ಲಿ ನಾನು ಕಂಡದ್ದು ವಿಶಿಷ್ಟವಾದ ನಿರೂಪಣಾ ಕಲೆ. ಅದೇ ಅವರ ಬರಹದ ಶಕ್ತಿ ಎಂದರು. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ 'ಸೈ' ಅನ್ನುವಂತೆ ಬರೆಯಬಲ್ಲ ವಿದ್ವತ್ತು ಇವರಲ್ಲಿ ಅಡಗಿದೆ ಎಂದರು.

ಈ ಸಂದರ್ಭದಲ್ಲಿ ಸರಿಸುಮಾರು ೧೩೦೦ ವರ್ಷಗಳ ಹಿಂದಿನ ಕನ್ನಡದ ಪ್ರಪ್ರಥಮ ಲೇಖಕಿ ವಿಜ್ಜಿಕಾ ಅವರು ನೆನಪಿಗೆ ಬರುತ್ತಾರೆ. ಇಂತಹ ಬರಹಗಾರ್ತಿಯರು ಮತ್ತು ಯುವ ಬರಹಗಾರರು ವಿಜ್ಜಿಕಾ ಅವರ ಸಾಲಿನಲ್ಲಿ ನಿಲ್ಲುತ್ತಾರೆ. ಆಕೆಯದ್ದು ಅದ್ಭುತವಾದ ಬರವಣಿಗೆ. ಇಂದಿನ ಬರಹಗಾರರ ರೀತಿಯನ್ನು ನೋಡಿದರೆ ನಮಗೆ ಆಶ್ಚರ್ಯ ಆಗುತ್ತದೆ. ಶ್ರೇಷ್ಠ ಮಟ್ಟದ ಶೈಲಿ, ನಿರೂಪಣೆ, ಭಾಷೆಯನ್ನು ಬಳಸುವ ರೀತಿ ನಿಜಕ್ಕೂ ಶ್ಲಾಘನೀಯ. ಪ್ರಗತಿಶೀಲ ಬರವಣಿಗೆಯ ಹಾದಿಯಲ್ಲಿ ನವ್ಯ, ಬಂಡಾಯ, ದಲಿತ, ದಲಿತೋತ್ತರ ನಂತರ ಕೆಲ ಕಾಲ ಸ್ತಬ್ಧವಾಗಿದ್ದ ಯುಗಾಂತರ ಇಂದು ಹೊಸ ಯುಗವನ್ನು ಕಾಣುತ್ತಿದೆ. ಲೇಖಕ ಮತ್ತು ಲೇಖಕಿಯರ ನಡುವಿನ ಅಂತರ ಕಡಿಮೆಯಾಗುತ್ತಾ 'ಯುವ ಪೀಳಿಗೆಯ ಮತ್ತು ಲೇಖಕಿಯರ ಯುಗ' ಉದಯವಾಗಿದೆಯೇನೋ ಅನ್ನಿಸುತ್ತಿದೆ ಎಂದರು.

**'ವೀಣಾ ಅವರದು ಸಂಚಲನ ಮೂಡಿಸುವ ಸಾಹಿತ್ಯ'**

ವೇದಿಕೆಯ ಮೇಲೆ ಉಪಸ್ಥಿತರಿದ್ದ ಗೌರವಾಧ್ಯಕ್ಷ ಡಾ. ಪಿ.ವಿ. ನಾರಾಯಣ ಅವರು ಡಾ. ವೀಣಾ ಶಾಂತೇಶ್ವರ ಅವರನ್ನು ಅಭಿನಂದಿಸುತ್ತಾ, ನಾನು ಅವರ 'ಮುಳ್ಳುಗಳು' ಕಥೆಯನ್ನು ಓದಿದ್ದೇನೆ. ಅದು ರಾಜ್ಯದಾದ್ಯಂತ ಸಂಚಲನವನ್ನು ಮೂಡಿಸಿತು. ಮೃದು ಸ್ವಭಾವದ ವೀಣಾ ಅವರು ಗಟ್ಟಿ ಬರಹವನ್ನೂ ನೀಡಬಲ್ಲರು ಎಂದು ಅದು ನಿರೂಪಿಸಿತು. ಈಕೆ ಮಹತ್ವದ ಲೇಖಕಿ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಪ್ರಶಸ್ತಿಗೆ ಉತ್ತಮ ಆಯ್ಕೆ ಎಂದರು.

ಮುಂದುವರೆಯುತ್ತಾ ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಳೆದುಬಂದ ರೀತಿ, ಹಂತ ಹಂತವಾಗಿ ಶ್ರೀಮತಿ ಕಮಲಿನಿ ಅವರು ನೀಡುತ್ತಿದ್ದ ಪ್ರೋತ್ಸಾಹ, ಧನಸಹಾಯ, ಎಂ.ವಿ.ಸೀ. ಅವರ ಅವಿರತ ಪ್ರಯತ್ನ, ಅಂದಿನ ಕನ್ನಡ ಪ್ರೇಮಿಗಳ ಉತ್ಸಾಹ ಇವುಗಳನ್ನು ಮನದಟ್ಟಾಗುವಂತೆ ಸಭೆಯ ಮುಂದೆ ಇಟ್ಟರು.

**'ಸ್ತ್ರೀವಾದಿ ವಿಮರ್ಶೆಯ ಗಟ್ಟಿದನಿ'**

ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷ ಭಾಷಣ ಮಾಡುತ್ತಾ, ಜನವರಿ ೩ನೇ ತಾರೀಖು ಪ್ರತಿಷ್ಠಾನಕ್ಕೆ ಸಂಭ್ರಮದ ದಿನ. ಅದಕ್ಕೆ ಹತ್ತಿರದ ಶನಿವಾರ ಅಥವಾ ಭಾನುವಾರ ಈ ಪ್ರಶಸ್ತಿ ನೀಡುತ್ತೇವೆ. ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರ ಸಾಹಿತ್ಯದಲ್ಲಿ ಕಾಣುವುದು ಸ್ತ್ರೀವಾದಿ ವಿಮರ್ಶೆಯ ಗಟ್ಟಿ ದನಿ. ಅವರ ಕಥೆಗಳಲ್ಲಿನ ಭಾಷಾ ಬಳಕೆ ಹೃದಯಸ್ಪರ್ಶಿ ಆದದ್ದು. ತಮ್ಮ ಜೀವನದ ಉದ್ದಗಲಕ್ಕೂ ಸಾಮಾಜಿಕ ಜೀವನದಲ್ಲಿ ಮಹಿಳೆಯರು ಮತ್ತು ಲೇಖಕಿಯರು ಎರಡನೇ ದರ್ಜೆಯವರಲ್ಲ, ಅವರು ಪುರುಷ ಸಮಾನರು ಎಂಬುದನ್ನು ಸಾಬೀತು ಪಡಿಸುತ್ತಾ ಬಂದ ಲೇಖಕಿ ಮತ್ತು ಹೊರಾಟಗಾರ್ತಿ. ಮಹಿಳೆಯರಿಗೂ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಇದೆ ಎಂದು ಪ್ರತಿಪಾದಿಸಿದವರು ಡಾ. ವೀಣಾ ಶಾಂತೇಶ್ವರ. ಇದು ಅವರ 'ಬಿಡುಗಡೆ' ಕೃತಿಯಲ್ಲಿ ಎದ್ದು ಕಾಣುತ್ತದೆ ಎಂದರು.

ಅನೇಕ ವರ್ಷಗಳಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಶಸ್ತಿ ಮತ್ತು ಸ್ಥಾನಮಾನದ ದೃಷ್ಟಿಯಿಂದ ಮಹಿಳೆಗೂ ಆದ್ಯತೆ ನೀಡಬೇಕು ಎಂಬ ಕೂಗು ಇತ್ತೇ ಹೊರತು, ಅದು ಪ್ರಭಾವಯುತವಾಗಿ ಕಾರ್ಯಗತವಾಗುತ್ತಿರಲಿಲ್ಲ. ಮೊನ್ನೆ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಡಾ. ವೀಣಾ ಶಾಂತೇಶ್ವರ ಅವರ ಹೆಸರೂ ಇತ್ತು. ಏಕೋ ಅವರ ಆಯ್ಕೆ ಆಗರಲಿಲ್ಲ. ಈ ದಿಶೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನ ದಿಟ್ಟ ನಿಲುವನ್ನು ತಳೆದು, ಆಯ್ಕೆ ಸಮಿತಿಗೆ ೨೦೨೫ರ 'ಶ್ರೀ ಸಾಹಿತ್ಯ' ಪ್ರಶಸ್ತಿಗೆ ಉತ್ತಮ ಮಹಿಳಾ ಸಾಹಿತಿಯನ್ನು ಆಯ್ಕೆ ಮಾಡಲು ಪ್ರಾಧಾನ್ಯತೆಯನ್ನು ನೀಡಬೇಕೆಂದು ಸೂಚಿಸಿತ್ತು. ಅದರಂತೆ ಆಯ್ಕೆ ಸಮಿತಿ ಕರ್ನಾಟಕದ ಮೂಲೆ ಮೂಲೆಗಳ ಮಹಿಳಾ ಸಾಹಿತಿಗಳ ಅನ್ವೇಷಣೆ ಮಾಡಿ ಡಾ. ಶ್ರೀಮತಿ ವೀಣಾ ಶಾಂತೇಶ್ವರ ಅವರೇ ಪ್ರಶಸ್ತಿಗೆ ಸೂಕ್ತ ಎಂದು ನಿರ್ಧರಿಸಿತು. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ನಿಕಟಪೂರ್ವ ಅಧ್ಯಕ್ಷರಾದ ಡಾ. ಲಕ್ಷ್ಮೀನಾರಾಯಣ ಅವರು ಮಾತನಾಡಿ, ಪ್ರಶಸ್ತಿ ವಿಜೇತೆ ಡಾ. ವೀಣಾ ಶಾಂತೇಶ್ವರ ಅವರನ್ನು ನಾನು ಧಾರವಾಡಕ್ಕೆ ಹೋದಾಗಲೆಲ್ಲಾ ಭೇಟಿ ಆಗುತ್ತಿದ್ದೆ. ಬಹಳ ಆತ್ಮೀಯ ವ್ಯಕ್ತಿ. ತಮ್ಮ ಅಧ್ಯಾಪನ ಮತ್ತು ಜವಾಬ್ದಾರಿಯುತ ಪ್ರಾಂಶುಪಾಲ ಹುದ್ದೆ ಇದ್ದಾಗ್ಯೂ ಸಾಹಿತ್ಯ ಕೃಷಿಯಲ್ಲಿ ಮತ್ತು ಸಂಘಟನಾ ಕಾರ್ಯಗಳಲ್ಲಿ ಇರುವ ಆಸಕ್ತಿಯನ್ನು ಉಳಿಸಿಕೊಂಡು ಬಂದ ಎದೆಗಾರ್ತಿ ವೀಣಾ ಅವರು. ಅವರಿಗೆ ಇಂದು ನಮ್ಮ ಪ್ರತಿಷ್ಠಾನದ 'ಶ್ರೀ ಸಾಹಿತ್ಯ ಪ್ರಶಸ್ತಿ' ನೀಡಿರುವುದು ಸಂತೋಷದ ವಿಷಯ. ಅವರಿಗೆ ಅಭಿನಂದನೆಗಳು ಎಂದರು.

ಈ ಪ್ರಶಸ್ತಿಯ ಆಯ್ಕೆ ಸಮಿತಿಯ ನೇತೃತ್ವವನ್ನು ನಾಡೋಜ ಡಾ. ಹಂಪನಾ ವಹಿಸಿದ್ದರು. ಪ್ರೊ. ಹೊಂಗಳ್ಳಿ ಸೋಮಣ್ಣ ಮತ್ತು ಶ್ರೀಮತಿ ರೂಪ ಹಾಸನ ಅವರು ಇತರ ಸದಸ್ಯರಾಗಿದ್ದರು.

ಪ್ರಶಸ್ತಿ ಸ್ವೀಕರಿಸಿದ ಡಾ. ವೀಣಾ ಶಾಂತೇಶ್ವರ ಅವರ ಕುಟುಂಬದ ಬಳಗ, ಆತ್ಮೀಯರು ಉಪಸ್ಥಿತರಿದ್ದರು.

'ಬುಕ್ ಬ್ರಹ್ಮ' ಕಾರ್ಯಕ್ರಮವನ್ನು ಅಂತರ್ಜಾಲದಲ್ಲಿ ಬಿತ್ತರಿಸಿತು.

ನಿರೂಪಣೆ ಮಾಡಿದ ಡಾ. ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯ ನಂತರ ಸವಿ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೪ ಶನಿವಾರ, ಸಂಜೆ ೫.೦೦
## ಗೊರೂರು ಸಾಹಿತ್ಯದಲ್ಲಿ ಹಾಸ್ಯ ಪ್ರಜ್ಞೆ–ಹಾಸ್ಯ ಬ್ರಹ್ಮ ಟ್ರಸ್ಟ್–ದತ್ತಿ ಕಾರ್ಯಕ್ರಮ

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿ ಶ್ರೀ ಚಂದ್ರಶೇಖರ ನಾದೂರು ಇವರ ನಿರೂಪಣೆಯಲ್ಲಿ ಉಪನ್ಯಾಸ ಕಾರ್ಯಕ್ರಮ ಪ್ರಾರಂಭವಾಯಿತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಪ್ರಾರಂಭದ ಬಗೆಗೆ ಸ್ವಾರಸ್ಯಕರವಾಗಿ ತಿಳಿಸಿಕೊಟ್ಟರು. ೧೯೫೫ರಲ್ಲಿ ಕೆಲವರು ಬೇಸರ ಕಳೆಯಲು ಬೆಂಗಳೂರಿನ ಸಂಗಮ್ ಥಿಯೇಟರ್ ಮುಂದಿನ ಪಾದಚಾರಿ ರಸ್ತೆಯಲ್ಲಿ ಹಾಸ್ಯಮಯವಾದ ಹರಟೆಗಳಲ್ಲಿ ಕಾಲ ಕಳೆಯುತ್ತಿದ್ದರಂತೆ. ಇದನ್ನು ಕಂಡ ಡಿ.ವಿ.ಜಿ. ಮುಂತಾದ ಕೆಲವು ಸಾಹಿತಿಗಳು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಬರುತ್ತಿದ್ದ ಒಂದು ಅಂಕಣದಿಂದ ಪ್ರೇರಿತರಾಗಿ ತಾವೂ ಹಾಸ್ಯಕೂಟವನ್ನು ಪ್ರಾರಂಭಿಸಿ ಮುಂದೆ ಎಚ್.ಎನ್. ಮಂದಿರದಲ್ಲಿ ಹಾಸ್ಯ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಅಲ್ಲಿ ಜನ ಕಿಕ್ಕಿರಿದು ಸೇರುತ್ತಿದ್ದರು. ಇದರ ಜೊತೆಗೇ ಈ ಗುಂಪು ಯುವ ಪೀಳಿಗೆಗಾಗಿ ಹಾಸ್ಯ ಸಾಹಿತ್ಯ ರಚನೆಯ ಕಮ್ಮಟಗಳನ್ನೂ ನಡೆಸುತ್ತಿತ್ತು. ಯುವ ಪೀಳಿಗೆ ಬೆಳೆದಂತೆ ಚದುರಿ ಹೋಗಿ ಈ 'ಹಾಸ್ಯಬ್ರಹ್ಮ ಟ್ರಸ್ಟ್' ನಡೆಸಲು ಅಸಾಧ್ಯವಾದಾಗ ಬಿ.ಎಂ.ಶ್ರೀ. ಪ್ರತಿಷ್ಠಾನದ ಮೇಲೆ ಇದ್ದ ನಂಬಿಕೆಯಿಂದ ೨೦೧೮ರಲ್ಲಿ ಹಸ್ತಾಂತರಿಸಿದರು. ಅಂದಿನಿಂದ ಈ ಹಾಸ್ಯಮಯ ಉಪನ್ಯಾಸ ಅವಿರತವಾಗಿ ನಡೆದುಕೊಂಡು ಬಂದಿದೆ ಎಂದು ಗುರುಪ್ರಸಾದ್ ತಿಳಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು, ಹಿರಿಯ ವಿಮರ್ಶಕ ಡಾ. ಎಸ್.ಆರ್. ವಿಜಯಶಂಕರ, ವೇದಿಕೆಯನ್ನು ಅಲಂಕರಿಸಿದ್ದ ಡಾ. ನೈಷಧಂ ಎಸ್ಸೆ. ಮತ್ತು ಇತರ ಸಭಿಕರನ್ನು ಆಹ್ವಾನಿಸಿ ನಂತರ ಇಂಟೆಲ್ ಕಂಪನಿಯ ಏಶಿಯ ಘಟಕದ ಸಲಹೆಗಾರರಾದ ಎಸ್.ಆರ್. ವಿಜಯಶಂಕರ ಅವರನ್ನು ಸಭೆಗೆ ಪರಿಚಯಿಸಿದರು.

**'ಹಾಸ್ಯವೆಂದರೆ ಜೋಕ್ ಅಲ್ಲ, ಅದೊಂದು ಜೀವನ ನಡೆಸಲು ಬೇಕಾದ ಪ್ರಜ್ಞೆ'**

ಶ್ರೀ ವಿಜಯಶಂಕರ ಅವರು ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿ, ಹಾಸ್ಯ ಮೀಮಾಂಸೆ ಮಾಡುವುದೆಂದರೆ ಅದು ಕೇವಲ ತಿಳಿಯಾದ ಮಟ್ಟದ ಜೋಕ್‌ಗಳನ್ನು ಮಾಡುವುದಲ್ಲ. ಅದೊಂದು ಗಂಭೀರ ವಿಷಯ. ನಿತ್ಯಜೀವನಕ್ಕೆ ದಾರಿದೀಪ. ಆದ್ದರಿಂದ ನಾನು ಹಾಸ್ಯದ ಬಗೆಗೆ ವೈಚಾರಿಕವಾಗಿ ಮಾತನಾಡುವೆ ಎಂದರು.

ಒಂದು ಕಾರ್ಯಕ್ರಮದಲ್ಲಿ ಗೊರೂರು ಅವರಿಗೆ ಆದ ಅನುಭವವನ್ನು ತಿಳಿಸುತ್ತಾ 'ಆ ಸಾಹಿತಿಗೆ ಈ ಪ್ರಸಂಗವು ಜೀವನವನ್ನು ನೋಡುವ ಕಣ್ಣು' ಅನ್ನಿಸಿತಂತೆ ಎಂದು ಬಹಳ ಸೊಗಸಾಗಿ, ಮಾರ್ಮಿಕವಾಗಿ ತಿಳಿಸಿದರು. ಅನಾಸಕ್ತಿ ಉಳ್ಳವರಿಗೆ ಮಾತ್ರ ಹಾಸ್ಯ ಪ್ರವೃತ್ತಿ ಸಾಧ್ಯ ಎನ್ನುವುದನ್ನು ಮಹಾತ್ಮ ಗಾಂಧೀಜಿ ಅವರ ಜೀವನದ ಬಗ್ಗೆ ಬರೆದಿರುವ ಪುಸ್ತಕವನ್ನು ಹೆಸರಿಸಿ ಒತ್ತಿ ಹೇಳಿದರು.




ಮೀಮಾಂಸಕರ ಪ್ರಕಾರ ಹಾಸ್ಯವೆಂಬುದು ಶೃಂಗಾರದ ತಮ್ಮ. ಹಾಸ್ಯ ಸತ್ಯದ ಬೆನ್ನು. ಹಾಸ್ಯದ ನಾನಾ ಅಲಂಕಾರಗಳು, ಅದರಲ್ಲಿ ಅಡಕವಾಗಿರುವ ಅಂಶಗಳು ಗ್ರಹಿಸುವವರ ಕ್ಷಮತೆಯನ್ನು ಅವಲಂಬಿಸುತ್ತವೆ. ಬುದ್ಧಿ ಹೇಳುವ ಹಾಸ್ಯ ಕೆಲವರಿಗೆ ಪರಿಹಾಸ್ಯವೆನಿಸಲೂಬಹುದು ಎಂದರು.

ಅ.ರಾ.ಮಿತ್ರರು ವಿಶ್ಲೇಷಿಸಿದ ಒಂದು ಹಾಸ್ಯ ಪ್ರಸಂಗವನ್ನು ಉದಾಹರಿಸಿದರು. ದುರ್ಯೋಧನ ಪಾಂಡವರು ನಿರ್ಮಿಸಿದ 'ಮಾಯಾ ಮಹಲ್' ಒಳಗೆ ಪ್ರವೇಶಿಸುವಾಗ ತಪ್ಪು ಗ್ರಹಿಕೆಯಿಂದ ಬಿದ್ದು ಬಿಡುತ್ತಾನೆ. ಆಗ ದ್ರೌಪದಿ ನಕ್ಕಿದ್ದೇ ಮುಂದೆ ದುರ್ಯೋಧನನ ದ್ವೇಷಕ್ಕೆ ಮೂಲವಾಗಿ ಯುದ್ಧಕ್ಕೆ ನಾಂದಿಯಾಗುತ್ತದೆ. ಆದರೆ ಮಿತ್ರರು ಆ ಪ್ರಸಂಗವನ್ನು ತಿಳಿಸುತ್ತಾ, ಒಂದು ವೇಳೆ ದುರ್ಯೋಧನ ಆ ಗಳಿಗೆಯಲ್ಲಿ ತನ್ನ ಹಾಸ್ಯ ಪ್ರಜ್ಞೆ ತೋರಿಸಿ, ದ್ರೌಪದಿಗೆ, 'ನಿನ್ನನ್ನು ಮತ್ತೊಮ್ಮೆ ನಗಿಸಲು ಇನ್ನೊಮ್ಮೆ ಬಿದ್ದು ತೋರಿಸಲೇ' ಎಂದುಬಿಟ್ಟಿದ್ದರೆ ಕಥೆಯೇ ಬೇರೆ ಆಗುತ್ತಿತ್ತು ಎಂದು ತಿಳಿಸಿ ಹಾಸ್ಯಕ್ಕೆ ಇರುವ ಅಗಾಧ ಬೆಲೆಯನ್ನು ತಿಳಿಸಿದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ತಮ್ಮ ಬಗ್ಗೆಯೇ ಹಾಸ್ಯ ಮಾಡಿಕೊಳ್ಳುತ್ತಿದ್ದ ಆತ್ಮಸ್ಥ ವ್ಯಕ್ತಿ ಎಂಬುದನ್ನು ವಿಜಯಶಂಕರ್ ಅವರು 'ಅಮೆರಿಕಾದಲ್ಲಿ ಗೊರೂರು' ಪುಸ್ತಕವನ್ನು ಉಲ್ಲೇಖಿಸಿ ತೋರಿಸಿದರು. ಇಂತಹ ಅನೇಕ ಪ್ರಸಂಗಗಳನ್ನು ಹೇಳಿ ಸಭಿಕರಿಗೆ ಹಾಸ್ಯದಲ್ಲಿ ಅಡಗಿರುವ ಮೌಲ್ಯಯುತ ವಿಚಾರಗಳನ್ನು ತೆರೆದಿಟ್ಟು ತಮ್ಮ ಉಪನ್ಯಾಸಕ್ಕೆ ಒಂದು ಘನತೆಯನ್ನು ಹಾಗೇ ಹಾಸ್ಯದಲ್ಲಿ ಅಡಗಿರುವ ಗಾಂಭೀರ್ಯವನ್ನು ತೋರಿಸಿಕೊಟ್ಟರು. ಇಂದಿನ ಈ ಉಪನ್ಯಾಸ ಎಲ್ಲರ ಕಣ್ಣು ತೆರೆಸುವಂತಹ ಕಾರ್ಯಕ್ರಮವಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ನೈಷಧಂ ಮಾತನಾಡುತ್ತಾ 'ವಿಜಯಶಂಕರ ಅವರು ತಮ್ಮ ಮಾತುಗಳಿಂದ ಸಭಿಕರನ್ನು ಮೂಕಸ್ಮಿತರನ್ನಾಗಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಯಾವುದೇ ವಿಷಯದ ಮೇಲೆ ಮಾತನಾಡಬೇಕಾದರೂ ಅವರು ಸಂಪೂರ್ಣ ಅಧ್ಯಯನ, ಪೂರ್ಣ ತಯಾರಿ ಇಲ್ಲದೇ ಬರುವವರಲ್ಲ. ಗೊರೂರು ಅವರ ಬಗ್ಗೆ ಹೇಳಬೇಕೆಂದರೆ, ಹಿಂದೆ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಸುಬ್ಬರಾವ್ ಅವರು ಗೊರೂರು ರಾಮಸ್ವಾಮಿಯವರು ಬರೆದಿದ್ದ 'ಹಳ್ಳಿಯ ಚಿತ್ರಗಳು' ಪುಸ್ತಕವನ್ನು ಓದಿ, ಇವರೊಬ್ಬ ವಿದ್ಯಾವಂತ ವ್ಯಕ್ತಿ ಎಂದು ಭಾವಿಸಿದ್ದರಂತೆ. ಹೀಗಾಗಿ ಅಧ್ಯಾಪಕ ಹುದ್ದೆಗೆ ನಿಯಮಿಸಲು

ಗೊರೂರು ಅವರನ್ನು ಕರೆದು ಕೇಳಿದಾಗ, ಗೊರೂರು ಅವರು ತಾವು ಯಾವ ಪರೀಕ್ಷೆಯನ್ನೂ ಪಾಸಾಗಿಲ್ಲ ಎಂದರಂತೆ. ಇದರಿಂದ ವಿಚಲಿತರಾದ ಸುಬ್ಬರಾವ್ ಮತ್ತೆ ಚೇತರಿಸಿಕೊಂಡು ಆಯ್ಕೆ ಸಮಿತಿಯ ಇತರ ಸದಸ್ಯರಿಗೆ ಗೊರೂರು ಅವರು ಬರೆದಿರುವ 'ಹಳ್ಳಿಯ ಚಿತ್ರಗಳು' ಗಿಂತ ಯಾವ ಪರೀಕ್ಷೆ ಬೇಕು ಎಂದರಂತೆ. ಮುಂದೆ ಗೊರೂರು ಅವರನ್ನು ಪ್ರೇರೇಪಿಸಿ ಮದ್ರಾಸ್ ನಲ್ಲಿ ವಿದ್ಯಾಭ್ಯಾಸಕ್ಕಾಗಿ ಕಳಿಸಿದರಂತೆ. ಆಶ್ಚರ್ಯವೆಂದರೆ, ಗೊರೂರು ಅವರು ಬರೆದ ಕಾದಂಬರಿಯೇ ಅವರಿಗೆ ಪಠ್ಯಪುಸ್ತಕವಾಗಿತ್ತಂತೆ. ಹೀಗೆ ಗೊರೂರು ಅವರ ಸಾಹಿತ್ಯದ ಸೊಗಡಿನ ಅನೇಕ ಸಂದರ್ಭಗಳನ್ನು ತಿಳಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೧೧ ಶನಿವಾರ, ಜನವರಿ ತಿಂಗಳ ಸಂಜೆ 'ಶ್ರೀಮತಿ ರಂಗನಾಯಕಮ್ಮ ಹಾಗೂ ಶ್ರೀ ಜಿ. ಸುಬ್ಬರಾವ್ ದಂಪತಿಗಳ ಹೆಸರಿನ ದತ್ತಿ' ಕಾರ್ಯಕ್ರಮ



ತೆರಿಗೆ ಸಲಹೆಗಾರರು ಮತ್ತು ಗಾಯಕಿಯಾದ ಶ್ರೀಮತಿ ಭವಾನಿ ಎಂ. ರಾವ್, ತಬಲಾ ವಾದಕ ವಿದ್ವಾನ್ ಶ್ರೀನಿವಾಸ ಕಾಖಂಡಕಿ, ಕೀಬೋರ್ಡ್ ಮೇಲೆ ರಮೇಶ ಟಿ.ಎಸ್., ಇವರೊಂದಿಗೆ ಈ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಪ್ರಾರಂಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಬಗ್ಗೆ ತಿಳಿಸುತ್ತಾ, ಮೇಲಿನ ದತ್ತಿಯನ್ನು ಸುಬ್ಬರಾವ್ ದಂಪತಿಗಳ ಮಗಳು ಶ್ರೀಮತಿ ಸುನಂದ ಮತ್ತು ಅಳಿಯ ಶಿವಶಂಕರ್ ಬಹಳ ಪ್ರೀತಿಯಿಂದ ಸ್ಥಾಪಿಸಿದ್ದಾರೆ. ಇವತ್ತಿನ ಕಾರ್ಯಕ್ರಮ ಹನ್ನೊಂದನೆಯದು. ಮೊದಮೊದಲು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆಗಳು ನಡೆದರೂ, ಈಗ ಕಾರಣಾಂತರದಿಂದ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿವೆ ಎಂದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಕಲಾವಿದರನ್ನು ಮತ್ತು ಸಂಗೀತಾಸಕ್ತ ಸಭಿಕರನ್ನು ಸಂಗೀತ ಕಛೇರಿಗೆ ಸ್ವಾಗತಿಸಿದರು. ಕಲಾವಿದರ ಪರಿಚಯದ ನಂತರ ಸಂಗೀತದ ಸ್ವಾದವನ್ನು ಕಲಾವಿದರು ಉಣಿಸಿದರು.

'ಜಯ ಜಯ ಕನ್ನಡ ರಾಜೇಶ್ವರಿ' ಹಾಡಿನೊಂದಿಗೆ ಶ್ರೀಮತಿ ಭವಾನಿ ಪೀಠಿಕೆ ಹಾಕಿದರು. ನಂತರ ಬಿ.ಎಂ.ಶ್ರೀ. ವಿರಚಿತ 'ಕರುಣಾಳು ಬಾ ಬೆಳಕೆ', ಜಿ.ಎಸ್. ಶಿವರುದ್ರಪ್ಪ ಅವರ 'ಎಲ್ಲೋ ಹುಡುಕಿದೆ ಇಲ್ಲದ ದೇವರ', ದ.ರಾ. ಬೇಂದ್ರೆಯವರ 'ನಾಕು ತಂತಿ', ಕುವೆಂಪು ಅವರ 'ಆನಂದಮಯ..', ಕೆ.ಎಸ್. ನಿಸಾರ್ ಅಹ್ಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ', 'ಮನ ತುಂಬಿ ಹಾಡಿದೆನು' ಮುಂತಾದ ಗೀತೆಗಳನ್ನು ಪ್ರಸ್ತುತ ಪಡಿಸಿ, ನೆರೆದ ಸಭಿಕರನ್ನು ಗೀತಗುಚ್ಛಗಳೊಂದಿಗೆ ಮನರಂಜಿಸಿ, ಅಭಿಮಾನದ ಚಪ್ಪಾಳೆಯನ್ನು ಪಡೆದದ್ದು ಶ್ರೀಮತಿ ಭವಾನಿ ಎಂ. ರಾವ್ ಅವರ ಪ್ರತಿಭೆಗೆ ಸಂದ ಗೌರವವಾಗಿತ್ತು. ಅವರ ಸಹಕಲಾವಿದರೂ ರಾಗ, ತಾಳ, ಪಲ್ಲವಿಗನುಗುಣವಾಗಿ ಪಕ್ಕವಾದ್ಯ ನುಡಿಸಿ ಈ ಸಂಗೀತ ಸಭೆಗೆ ಶೋಭೆಯನ್ನು ತಂದುಕೊಟ್ಟರು.

ಕಲಾವಿದರಿಗೆ ನೆನಪಿನ ಕಾಣಿಕೆ ಕೊಟ್ಟ ನಂತರ ವಂದನಾರ್ಪಣೆಯೊಂದಿಗೆ ಗೀತಗಾಯನದ ರಸಸಂಜೆ ಕಾರ್ಯಕ್ರಮ ಮುಕ್ತಾಯವಾಯಿತು.

**ಪ್ರಕಟಣೆ**

## ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆ

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ 'ಶ್ರೀ ಕೆ. ಮೋಹನ್‌ದೇವ್ ಆಳ್ವ – ಡಾ. ಎಂ.ಕೆ. ಶೈಲಜಾ ಆಳ್ವ' ಅವರು ಸ್ಥಾಪಿಸಿರುವ ಶ್ರೀ ಕೆ. ಮೋಹನ್‌ದೇವ್ ಆಳ್ವ – ಡಾ. ಎಂ.ಕೆ. ಶೈಲಜಾ ಆಳ್ವ ದತ್ತಿ ಮತ್ತು ಸಂಗೀತ ಸರಸ್ವತಿ ಶ್ರೀ ಪಿಟೀಲು ಚೌಡಯ್ಯ ದತ್ತಿಗಳ ಆಶ್ರಯದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನವು ೧೦–೧೬ ವರ್ಷ ವಯಸ್ಸಿನವರಿಗೆ ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆಯನ್ನು ಏರ್ಪಡಿಸಿದೆ.

ಸ್ಪರ್ಧೆಯು ೧೬ ಫೆಬ್ರವರಿ ೨೦೨೫ ಭಾನುವಾರ ನಡೆಯಲಿದ್ದು, ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಫೆಬ್ರವರಿ ೧೦ ಸೋಮವಾರ ಸಂಜೆ ೫–೦೦ ಗಂಟೆಯ ಒಳಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಛೇರಿ, ೩ನೇ ಮುಖ್ಯರಸ್ತೆ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೦೪, ಇಲ್ಲಿ ಹೆಸರನ್ನು ವಯಸ್ಸಿನ ಆಧಾರ ಪತ್ರದೊಂದಿಗೆ ಖುದ್ದಾಗಿ ನೋಂದಾಯಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ವಿಜೇತರಾದವರಿಗೆ ಪ್ರಥಮ ಬಹುಮಾನ ೪,೦೦೦/– ರೂಪಾಯಿ, ದ್ವಿತೀಯ ಬಹುಮಾನ–೩,೦೦೦/– ರೂಪಾಯಿ ಮತ್ತು ತೃತೀಯ ಬಹುಮಾನ–೨,೦೦೦/– ರೂಪಾಯಿಗಳನ್ನು ನಗದು ರೂಪದಲ್ಲಿ ಪ್ರಶಸ್ತಿಪತ್ರಗಳೊಂದಿಗೆ ನೀಡಲಾಗುವುದು. ಸ್ಪರ್ಧಿಗಳು ಪಿಟೀಲು ಮತ್ತು ಶೃತಿಯ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು. ಪಿಟೀಲು ವಾದನಕ್ಕೆ ರಾಗ ಮತ್ತು ಸ್ವರಕ್ಕೆ ಗರಿಷ್ಠ ೧೦ ನಿಮಿಷ ಸಮಯವಿರುತ್ತದೆ.

**ಅರ್ಜಿಗಳು ಪ್ರತಿಷ್ಠಾನದ ಕಛೇರಿಯಲ್ಲಿ ದೊರೆಯುತ್ತವೆ.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**
**೯೯೭೨೮೧೨೧೨೬**

**ಡಾ. ಶಾಂತರಾಜು**
ಗೌರವ ಕಾಯದರ್ಶಿ

## ದಿನಾಂಕ ೧೬ ಗುರುವಾರ, ಜನವರಿ ತಿಂಗಳ ಸಂಜೆ.
## 'ದಿ. ಬಿ.ಎಸ್. ಗೋಪಾಲರಾವ್ ಮತ್ತು ಶ್ರೀಮತಿ ವೇದವತಿ ಬಾಯಿ ದತ್ತಿ' ಆಶ್ರಯದಲ್ಲಿ ಶ್ರೀಮತಿ ವಿಶಾಖಾ ಗಮಕ ವಾಚನ ಮತ್ತು ಡಾ. ಸುಕನ್ಯಾ ಹೆಗಡೆ ಇವರ ವ್ಯಾಖ್ಯಾನ ಕಾರ್ಯಕ್ರಮ







ಈ ದತ್ತಿಯನ್ನು ಬಹುಮುಖ ಆಸಕ್ತಿಯುಳ್ಳ ಶ್ರೀಮತಿ ಬಿ.ಜಿ.ಕುಸುಮ ಅವರು ಸ್ಥಾಪಿಸಿದರು. ಸ್ವತಃ ವಿಜ್ಞಾನ ವಿಷಯದ ಶಿಕ್ಷಕಿಯಾಗಿ ಹಾಗೂ ಸಂಗೀತ, ಗಮಕಗಳಲ್ಲಿ ತೊಡಗಿಸಿಕೊಂಡಿದ್ದ ಶ್ರೀಮತಿ ಕುಸುಮ ಅವರು ನಮ್ಮಲ್ಲಿ ಎರಡು ದತ್ತಿಗಳನ್ನು ಸ್ಥಾಪಿಸಿದ್ದಾರೆ. ಒಂದು ಸರ್ ಸಿ.ವಿ.ರಾಮನ್ ಹೆಸರಿನಲ್ಲಿ ವಿಜ್ಞಾನ ವಿಷಯದಲ್ಲಿ ದತ್ತಿ, ಮತ್ತೊಂದು ಸಂಗೀತ ಅಥವಾ ಗಮಕಕ್ಕೆ ಸಂಬಂಧಿಸಿದ್ದು. ಇಂದು ನಡೆಯುತ್ತಿರುವುದು ಗಮಕ ವಾಚನ ಮತ್ತು ವ್ಯಾಖ್ಯಾನ ಎಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಪೀಠಿಕೆ ಮಾತುಗಳಾಡಿ, ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲರನ್ನೂ ಸ್ವಾಗತಿಸಿ, ಗಮಕ ಕಲಾವಿದರುಗಳ ಕಿರುಪರಿಚಯವನ್ನು ಮಾಡಿದರು.

'ಶ್ರೀಮತ್ ಕಲ್ಯಾಣರೂಪಂ........ ಪಾದಪದ್ಮಜಮ್' ಪ್ರಾರ್ಥನಾ ನುಡಿಯೊಂದಿಗೆ ಚಂಪು ಕಾವ್ಯದ ಒಂದು ಕಥಾಪ್ರಸಂಗವಾದ ಷಡಕ್ಷರದೇವನ 'ಶಬರಶಂಕರವಿಳಾಸಂ' ವಾಚನವನ್ನು ಗಮಕ ಕಲಾವಿದೆ ಶ್ರೀಮತಿ ವಿಶಾಖಾ ಅವರು ಪ್ರಾರಂಭಿಸಿದರು. ಈ ಪ್ರಸಂಗದ ವರ್ಣನೆಯನ್ನು ಕವಿ ಹೇಗೆ ಮಾಡಿದ್ದಾನೆ ಎಂಬುದನ್ನು ಐ.ಎನ್.ಐ.ಎಂ.ಎಸ್. ಕಾಲೇಜ್‌ನ ಪ್ರಾಂಶುಪಾಲರಾದ ಡಾ. ಸುಕನ್ಯಾ ಹೆಗಡೆ ಬಹಳ ಸುಂದರವಾಗಿ, ಸರಳ ಭಾಷೆಗಳಲ್ಲಿ ಮನದಟ್ಟಾಗುವಂತೆ ವರ್ಣಿಸಿದರು. ವನವಾಸ, ಅಜ್ಞಾತವಾಸ ಮುಗಿದ ನಂತರ ಪಾಂಡವರು ಮರಳಿ ಬರಬೇಕು, ಬಂದು ರಾಜ್ಯಭಾರ ಮಾಡಬೇಕಾದರೆ ಶಸ್ತ್ರಾಸ್ತ್ರಗಳು ಬೇಕೇಬೇಕು. ಅದೂ ಕೌರವರೊಂದಿಗೆ ಯುದ್ಧಕ್ಕೆ ಅಂತಿಂತಹ ಆಯುಧಗಳು ಸಾಕೇ? ಇಂತಹ ಯೋಚನೆ ಬಂದು ಧರ್ಮರಾಯ ಖಿನ್ನತೆಗೊಳಗಾದಾಗ, ಅವನಿಗೆ ಸಾಕ್ಷಾತ್ ಶಿವನನ್ನು ಬೇಡಿದರೆ ಪ್ರಬಲವಾದ ಶಸ್ತ್ರಗಳು ಸಿಗುತ್ತವೆ ಎಂಬ ಸಲಹೆ ಬರುತ್ತದೆ. ಆಗ ಆತ ಈ ಕೆಲಸಕ್ಕೆ ಅರ್ಜುನನೇ ಸೂಕ್ತ ಎಂದು ನಿರ್ಧರಿಸಿ, ಅವನನ್ನು ಘೋರ ತಪಸ್ಸು ಮಾಡಿ, ಈಶ್ವರನಿಂದ ಯಾರೂ ಭೇದಿಸಲಾಗದ ಅಸ್ತ್ರಗಳನ್ನು ಪಡೆದು ತರಲು ಕಳಿಸುತ್ತಾನೆ. ಅಣ್ಣನ ಮಾತು ಮೀರದ ಅರ್ಜುನ ಕಾಡಿಗೆ ಹೋಗಿ ಮಾಡುವ ಘೋರ ತಪಸ್ಸಿನ ವರ್ಣನೆ ಕೇಳಿದರೆ ರೋಮಾಂಚನವಾಗುವಂತೆ ವಾಚನ ಮತ್ತು ವ್ಯಾಖ್ಯಾನ ನಡೆಯಿತು. ಅದು ಕವಿಯ ವರ್ಣನೆಗೆ ಸರಿಸಾಟಿಯಾಗಿತ್ತು.

ಹಂದಿಯ ರೂಪದಲ್ಲಿ ಬಂದರೂ ಎಲ್ಲರೂ ಬೆಚ್ಚಿ ಬೀಳುವಂತಹ ಘೋರವಾದ ಮೂಕಾಸುರನ ಆಗಮನದ ವರ್ಣನೆ. ನೋಡಲು ಹಂದಿ, ಆದರೆ ಕಂಡದ್ದು ಯಮನ ಕೋಣದ ಕೋಡುಗಳು, ಕೋರೆಹಲ್ಲುಗಳುಳ್ಳ ಗಜಾಸುರ, ಕಾಲಿಲ್ಲದಿದ್ದರೂ ನಡೆದು ಬರುತ್ತಿರುವ ಪರ್ವತವೇನೋ ಎಂಬಂತೆ ಭಾಸವಾಗುತ್ತಿದ್ದ ವರ್ಣನೆ ಮೈ ಜುಮ್ಮೆನ್ನುವಂತೆ ಇತ್ತು. ಹೀಗೆ ಹಲವಾರು ಇಂತಹ ರೋಚಕ ಸನ್ನಿವೇಶ ಸೃಷ್ಟಿಯ ಕವಿಯ ಚಮತ್ಕಾರವನ್ನು ಶ್ರೀಮತಿ ವಿಶಾಖಾ ವಾಚಿಸಿದರೆ, ಅಷ್ಟೇ ಸ್ವಾರಸ್ಯಕರವಾಗಿ ಡಾ. ಸುಕನ್ಯಾ ಹೆಗಡೆ ವ್ಯಾಖ್ಯಾನಿಸಿದ್ದು ಈ ಕಾರ್ಯಕ್ರಮಕ್ಕೆ ಮೆರಗು ತಂದುಕೊಟ್ಟಿತ್ತು. ಅರ್ಜುನನ ತಪಸ್ಸಿಗೆ ಒಲಿದರೂ, ಅವನನ್ನು ಇನ್ನಷ್ಟು ಪರೀಕ್ಷಿಸಲು ಸ್ವತಃ ಆ ಶಿವ ಬೇಡನ ವೇಷದಲ್ಲಿ ಬಂದಾಗ, ಶಿವಾರ್ಜುನರ ಯುದ್ಧದ ಆ ಕ್ಷಣಗಳನ್ನು ಬಣ್ಣಿಸಿದ್ದು, ಆ ದೃಶ್ಯವನ್ನು ಸೃಷ್ಟಿಸಿದ ಕವಿ ಶ್ರೇಷ್ಠನೋ, ವರ್ಣಿಸಿದ ಗಮಕಿಗಳು ಶ್ರೇಷ್ಠರೋ ಎನ್ನುವ ಸಂಶಯ ಸಭಿಕರಿಗೆ ಗೊಂದಲ ಉಂಟುಮಾಡಿತ್ತು. ಆ ಪರಶಿವನಿಂದ ಪಾರ್ಥ 'ಪಾಶುಪತಾಸ್ತ್ರ' ವನ್ನು ಪಡೆಯುವ ದಿವ್ಯ ದೃಶ್ಯದೊಂದಿಗೆ ಗಮಕ ಕಥಾ ಕುಸುಮದ ವಾಚನ ಹಾಗೂ ವ್ಯಾಖ್ಯಾನ ಮುಕ್ತಾಯವಾಯಿತು.

ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ, ಗೌರವಾಧ್ಯಕ್ಷರಾದ ಡಾ. ಪಿ.ವಿ.ನಾರಾಯಣ, ಗೌರವ ಕಾರ್ಯದರ್ಶಿ ಡಾ. ಶಾಂತರಾಜು, ದತ್ತಿ ದಾನಿಗಳ ಅಭಿಮಾನಿಗಳು, ಕಾರ್ಯಕಾರೀ ಸಮಿತಿಯ ಸದಸ್ಯರು, ಗಮಕಿಗಳ ಆಪ್ತರು ಉಪಸ್ಥಿತರಿದ್ದರು.

ಪ್ರತಿಷ್ಠಾನದ ನೆನಪಿನ ಕಾಣಿಕೆ, ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



# ಬಿ.ಎಂ.ಶ್ರೀಕಂಠಯ್ಯ

## ೬. ನಾಟಕಗಳು

ಮುಂದುವರೆದ ಭಾಗ...

ಡಾ. ರಾಮೇಗೌಡ (ರಾಗೌ)

ಅಶ್ವತ್ಥಾಮನ ಸ್ನೇಹಕ್ಕಾಗಿ ಅವರು ಬಂದರೆಂಬುದು ಸ್ಪಷ್ಟ. ಕಾಡಿನ ನಿರಸೂಯ ಜಗತ್ತಿನಲ್ಲಿದ್ದ ತಾವು ಈ ಅಸೂಯಾಪರ ಪ್ರಪಂಚಕ್ಕೆ ಬಂದದ್ದರಿಂದ ತಮ್ಮಲ್ಲಿ ತಪ್ಪಿಲ್ಲದಿದ್ದರೂ, ತಪ್ಪಾದ ಜಗತ್ತಿನೊಡನೆ ತಾವೂ ಕಾಲಿರಿಸಿದಂತಾಗಲಿಲ್ಲವೆ ಎಂಬ ಯಾರ ಆಲೋಚನೆ ಅವರದು. ಆದ್ದರಿಂದ ಸಹಜವಾಗಿಯೇ ತಮ್ಮ ನಾಡಿನ ನೆನಪು ಅವರಿಗೆ;

**ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸಿ,**
**ಬಳೆದಲೆದಾ ಕಾನ್ ಮಲೆಗಳನ್ ಆನ್ ಮಱೆವೆನೆ, ಬನವಾಸೀ!**
**ಭಾರತದೀ ಸುಟಱೆಗಾಳಿಗೆ ಸಿಲ್ಕುತೆ ನಾನ್ ತಱಗಾದೆನ್;**
**ಪೆಱೆ ತುಂಬುತೆ, ಮನಗಾಣದೆ ಬಡವಾದೆನ್,**
**ನಿನ್ನನ್ ನೆನೆನೆನೆದೋ ತಾಯ್, ಪಂಬಲಿಸುವ ನೋವೊಂದೇ!**
**ಇನ್ನೆನಗೇನಾಸೆಗಳೋ, ಪಾರ್ವುದು ನಾನ್ ಸಾವೊಂದೇ!**

ಕಾಡಿನ ಸಂಸ್ಕೃತಿಯಿಂದ ಬಂದ ತಮ್ಮನ್ನು ನಾಡಿನ ಸಂಸ್ಕೃತಿ ಅಸ್ತಿತ್ವಕ್ಕೆ ಧಕ್ಕೆ ತಂದು, ಸಾವಿನತ್ತ ಒಯ್ಯುತ್ತಿರುವುದರ ಬಗ್ಗೆ ಅವರಿಗೆ ತೀವ್ರ ಆತಂಕವಿದೆ; ಆದರೆ ಪರ್ಯಾಯವಿಲ್ಲದೆ ನರಳುವ ಸ್ಥಿತಿಯನ್ನು ಅವರು ಎದುರಿಸುತ್ತಿದ್ದಾರೆ. ಮೇಳದ ಈ ಮಾತುಗಳ ಮೇಲೆ ಪಂಪನ ಬನವಾಸಿ ವರ್ಣನೆಯ ಪ್ರಭಾವವಿರುವುದು ಸ್ಪಷ್ಟವಿದೆ.

ಅಶ್ವತ್ಥಾಮನ ಶವಸಂಸ್ಕಾರವೂ ಸಮಸ್ಯೆಯಾಗುವುದು. ಏಕಲವ್ಯ ತನ್ನ ಸ್ನೇಹಿತನ ಶವಸಂಸ್ಕಾರಕ್ಕೆ ಸಿದ್ಧತೆ ನಡೆಸುತ್ತಿದ್ದಾಗ, ಮಧ್ಯೆ ಪ್ರವೇಶಿಸಿದ ಭೀಮ ತಡೆಯಲು ಯತ್ನಿಸುವನು. ಅವರಿಬ್ಬರ ನಡುವೆ ತೀವ್ರವಾದ ಮಾತಿನ ಚಕಮಕಿಯಾಗುವುದು. ಇಬ್ಬರೂ ತಮ್ಮ ತಮ್ಮ ನಿಲುವಿಗೆ ಅಂಟಿಕೊಂಡಾಗ, ಆಗಮಿಸಿದ ಕೃಷ್ಣನು ವಾತಾವರಣವನ್ನು ತಿಳಿಗೊಳಿಸುವನು. ಸತ್ತ ನಂತರ ಶತ್ರುವಲ್ಲ ಎಂದು ವಾದಿಸಿ ಭೀಮನು ಹಿಂದಿರುಗುವಂತೆ ಮಾಡುವಲ್ಲಿ ಕೃಷ್ಣನು ಯಶಸ್ವಿಯಾಗುವನು. ಶವಸಂಸ್ಕಾರ ಕಾರ್ಯವನ್ನು ನಿರಾತಂಕಗೊಳಿಸಿದ ಕೃಷ್ಣನ ಉದಾತ್ತತೆಯನ್ನು ಏಕಲವ್ಯ ಶ್ಲಾಘಿಸುವನು. ಆದರೆ ಶವಸಂಸ್ಕಾರ ಸಂದರ್ಭದಲ್ಲಿ ಕೃಷ್ಣನ ಉಪಸ್ಥಿತಿಯನ್ನು ನಯವಾಗಿ ನಿರಾಕರಿಸಿದ ಏಕಲವ್ಯನ ಮಾತಿಗೆ ಮನ್ನಣೆ ನೀಡಿ, ಕೃಷ್ಣನು ನಿರ್ಗಮಿಸುವನು. ಹೀಗೆ ಇಡೀ ಪ್ರಸಂಗ ಆತಂಕ, ಶೋಕ, ವಾದ, ಸಮಾಧಾನ, ಶೂನ್ಯಭಾವಗಳಿಂದ ಆವೃತವಾಗಿದೆ. ಈ ಎಲ್ಲ ತುಮುಲಗಳ ನಡುವೆ ಕಲಾನುಭವ ಪಡೆಯುವುದು ಓದುಗನಿಗೆ ಕಷ್ಟವಾಗಬಹುದು. ಅದು ನಾಟಕದ ಕಲಾತ್ಮಕತೆಯ ಕೊರತೆಯನ್ನು ಹೇಳುವುದಿಲ್ಲ. ಕಡೆಯಲ್ಲಿ ಏಕಲವ್ಯ ತಳೆಯುವ ಕೃಷ್ಣನ ಉಪಸ್ಥಿತಿ ನಿರಾಕರಣೆಯ ಧೋರಣೆ ಅದ್ಭುತವಾದ 'ನಾಟಕೀಯ ವ್ಯಂಗ್ಯ'(Dramatic Irony)ಕ್ಕೆ ಕಾರಣವಾಗಿದೆ. ಮೂಲಭಾರತದ ಕಥೆಯಲ್ಲಿ ಈ ಸಮಸ್ಯೆ ಬರುವುದಿಲ್ಲ; ಏಕೆಂದರೆ, ಅಲ್ಲಿ ಅಶ್ವತ್ಥಾಮ ಸಾಯುವುದೇ ಇಲ್ಲ. ಈ ಪ್ರಸಂಗ ಪೂರ್ಣವಾಗಿ ಸೊಫೊಕ್ಲೀಸ್ ಕವಿಯ ಕೊಡುಗೆ. ಅಲ್ಲಿನ ಏಜಾಕ್ಸ್ ಮರಣಾನಂತರದ– ಅವನೂ ಖಡ್ಗದ ಮೇಲೆ ಬಿದ್ದು ಸಾಯುವನು. ಶವಸಂಸ್ಕಾರ ಸಮಸ್ಯೆಯನ್ನು ಚಾಚೂ ತಪ್ಪದೆ ಬಿ.ಎಂ.ಶ್ರೀ.ಯವರು ಸ್ವೀಕರಿಸಿದ್ದಾರೆ, ಏನೊಂದೂ ವ್ಯತ್ಯಾಸ ಮಾಡದೆ. ಅಲ್ಲಿನ ತ್ಯೂಕ್ರೋಸ್‌ನಲ್ಲಿ ಏಕಲವ್ಯನನ್ನೂ, ಮೆನೆಲೌಸ್ ಮತ್ತು ಅಗಮೆಮ್ನೋನ್ ಸೋದರರ ಪಾತ್ರದಲ್ಲಿ ಭೀಮನನ್ನೂ, ಒದಿಸ್ಸ್ಯೂಸ್ ಪಾತ್ರದಲ್ಲಿ ಕೃಷ್ಣನನ್ನೂ ಇರಿಸಿ ಕಾರ್ಯ ನಿರ್ವಹಿಸುವಂತೆ ಮಾಡಲಾಗಿದೆ. ಅದೇ ಸಂಸ್ಕಾರ, ಅದೇ ಚರ್ಚೆ, ಅದೇ ನಿರ್ಣಯ ಇಲ್ಲಿಯೂ ಪೂರ್ಣರೂಪದಲ್ಲಿ ಕಾಣಿಸಿಕೊಂಡಿದೆ. ಕಲಾತ್ಮಕತೆಯೂ ಸೇರಿದಂತೆ ಈ ಪ್ರಕರಣದ ಸ್ವಾಮ್ಯ ಸೊಫೊಕ್ಲೀಸ್ ಕವಿಯದು; ಅಳವಡಿಕೆಯ ಸೌಂದರ್ಯ ಶ್ರೀಯವರದು.

'ಅಶ್ವತ್ಥಾಮನ್' ನಾಟಕ 'ಏಜಾಕ್ಸ್' ನಾಟಕಕ್ಕೆ ಎಷ್ಟು ಋಣಿಯಾಗಿದೆ ಎಂದು ಹೇಳುವುದಕ್ಕೆ ಅನೇಕ ಪ್ರಸಂಗಗಳನ್ನೂ, ಸನ್ನಿವೇಶಗಳನ್ನೂ, ಮಾತುಗಳನ್ನೂ ಉದಾಹರಿಸಬಹುದು. ಬಿ.ಎಂ.ಶ್ರೀ.ಯವರು ತಮಗಿರುವ ಸೃಜಶೀಲನಶಕ್ತಿಯನ್ನು ಬಳಸಿ ತಮ್ಮ ಕೃತಿಯನ್ನು ಸ್ವತಂತ್ರ ನಾಟಕವನ್ನಾಗಿಸಲು ಬಹಳ ಪ್ರಯತ್ನಿಸಿದ್ದಾರೆ. ಅದರಲ್ಲಿ ಅವರು ಸೋಲು ಗೆಲುವು ಎರಡನ್ನೂ ಪಡೆದಿದ್ದಾರೆ. ಎರಡೂ ಕೃತಿಗಳನ್ನು ಅಕ್ಕಪಕ್ಕದಲ್ಲಿರಿಸಿಕೊಂಡು ನೋಡಿದರೆ ಇದು ವ್ಯಕ್ತವಾಗುವುದು. ಆಯ್ದ ನಿದರ್ಶನಗಳನ್ನಿಲ್ಲಿ ನೀಡಬಹುದು.

'ಏಜಾಕ್ಸ್' ನಾಟಕದ ಆರಂಭದಲ್ಲಿಯೇ ಅಥೆನಾ ದೇವತೆ ಮತ್ತು ಒದಿಸ್ಸ್ಯೂಸ್ ಪಾತ್ರಗಳ ನಡುವೆ ಸಂಭಾಷಣೆ ಬರುತ್ತದೆ. ಏಜಾಕ್ಸನ ದಾರುಣ ಸ್ಥಿತಿಯನ್ನು ಕಂಡು ಅವರು ಸಂಭಾಷಿಸುತ್ತಾರೆ. ಅಂಥದೊಂದು ಸಂಭಾಷಣೆ ಹೀಗಿದೆ (ಸುಜನಾ ಅವರ ಅನುವಾದ):

**ಅಥೆನಾ** : ಕಂಡೆಯಾ, ಒದಿಸ್ಸ್ಯೂಸ್? ದೇವತೆಗಳ ಬಲವೆಷ್ಟು ಬಲ್ಲಿತೆಂದರಿತೆಯಾ? ಈತನಿಗೆ ಸರಿಮಿಗಿಲಾದ ವಿವೇಕಿಯನ್ನು, ಮಹಾವೀರನನ್ನು ನೀನೇನಾದರೂ ಕಂಡಂತಿರುವೆಯಾ?

**ಒದಿಸ್ಸ್ಯೂಸ್** : ಅವನಿಗಿಂತ ಉದಾತ್ತನನ್ನು ನಾನರಿಯೆ! ಅವನೇನೊ ನನ್ನ ಪರಮಶತ್ರುವೆ ಆಗಿದ್ದ. ಆದರಿಂದವನ ದಾರುಣ ಸ್ಥಿತಿಗಾಗಿ ಮರುಗುವೆ; ಕೈಕಾಲ್ ಬಿಗಿದು ಕಬಳಿಸಿರುವ ದುರ್ಗತಿಗಾಗಿ ಕೊರಗುವೆ. ಇದಕ್ಕಿಂತ ನನ್ನ ಗತಿ ಬೇರೆಂದು ನಾನೇನೂ ತಿಳಿಯೆ, ಜೀವರಾಶಿಗಳೆಲ್ಲ ನಾವು ಬರಿ ಬಯಲ ಗಾಳಿಗಳು, ಹರಿವ ನೆಳಲುಗಳು ಅಷ್ಟೆ.

**ಅಥೆನಾ** : ಎಚ್ಚರ! ಅದರಿಂದ ದುರಹಂಕೃತಿಯ ದೈವದ್ರೋಹ ವನ್ನೆಂದಾದರೂ ನುಡಿದೀಯೆ! ಗರ್ವದ ಮಾತಾಡುವುದು, ಬಲದಿಂದಾಗಲಿ ಧನದಿಂದಾಗಲಿ ಗೆಲುವಿನಿಂದಾಗಲಿ ಕೊಬ್ಬಿ ನುಡಿವುದು, ಎಂದೂ ತಗದು. ಮರ್ತ್ಯವೆಂಬುದೆಲ್ಲ ತಕ್ಕಡಿದಂಡಿಯಲ್ಲಿ ತೂಗಾಡುವಂತಹುದೆ. ಒಂದು ದಿನ ಇದು ಮೇಲೆದ್ದರೆ ಮತ್ತೊಂದರೆಕ್ಷಣದಲ್ಲದು ಎದ್ದು ಏರುಪೇರಾಗುತ್ತದೆ. ಮಿತಿಯರಿತು ನಡೆವರನ್ನೆಂದೂ ದೇವತೆಗಳು ಮೆಚ್ಚಿಕೊಳ್ಳುವರು, ಅಹಂಮತ್ತರನ್ನದುಮಿಬಿಡುತ್ತಾರೆ.

(ಮುಂದುವರೆಯುವುದು)

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-01-2025

# ಪ್ರಸ್ತುತ ತಿಂಗಳ ಅಂಗಳ

**ದಿನಾಂಕ ೦೫.೦೨.೨೦೨೫ ಬುಧವಾರ**
**ಸಂಜೆ ೫.೦೦ ಗಂಟೆಗೆ**
ಹಳಗನ್ನಡ ನಡುಗನ್ನಡ ಕಾವ್ಯ ರಸಗ್ರಹಣ ತರಗತಿಗಳ ಉದ್ಘಾಟನೆ

**ದಿನಾಂಕ ೦೬-೦೨-೨೦೨೫ ಗುರುವಾರ**
**ಸಂಜೆ ೫-೦೦ ಗಂಟೆಗೆ**
ಡಾ. ಎಂ.ಎ. ಜಯಚಂದ್ರ ದತ್ತಿ
ವಿಷಯ : ಮಹಾಕವಿಚಂದ್ರಸಾಗರವರ್ಣಿಯ ಜೀವನ ಮತ್ತು ಕೃತಿಗಳು
ಉಪನ್ಯಾಸಕರು : ಡಾ. ಗಂಗಾಬಿಕೆ ಗೋವರ್ಧನ್
ಕನ್ನಡ ಉಪನ್ಯಾಸಕರು ಮತ್ತು ಸಂಶೋಧಕರು, ಬೆಂಗಳೂರು

**ದಿನಾಂಕ ೦೯-೦೨-೨೦೨೫ ಭಾನುವಾರ**
**ಬೆಳಗ್ಗೆ ೧೦.೩೦ ಗಂಟೆಗೆ**
ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ವಿಚಾರ ಸಂಕಿರಣ ಮತ್ತು ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ
ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ :
ಪ್ರೊ. ಎಚ್.ಎಸ್. ರಾಘವೇಂದ್ರರಾವ್
ವಿಚಾರ ಮಂಡನೆ : ಎಸ್.ಆರ್. ವಿಜಯಶಂಕರ್,
ಡಾ. ಟಿ.ಎನ್. ವಾಸುದೇವಮೂರ್ತಿ
ಪ್ರಶಸ್ತಿ ಪುರಸ್ಕೃತರು–ವಿಮರ್ಶಾ ಪ್ರಶಸ್ತಿ : ಎಸ್.ಆರ್. ವಿಜಯಶಂಕರ್
ಸಮೂಹ ಮಾಧ್ಯಮ : ಡಾ. ಬಾಬು ಕೃಷ್ಣಮೂರ್ತಿ

**ದಿನಾಂಕ ೧೫-೦೨-೨೦೨೫ ಶನಿವಾರ**
**ಬೆಳಗ್ಗೆ ೧೦.೩೦ ಗಂಟೆಗೆ**
ಪಂಡಿತ್ ಓ.ಆರ್. ರಾಮಣ್ಣ – ಶ್ರೀಮತಿ ಪುಟ್ಟಮ್ಮ ದತ್ತಿ ಉಪನ್ಯಾಸ
ಉಪನ್ಯಾಸಕರು: ಡಾ.ಎ.ವಿ.ಪ್ರಸನ್ನ, ಅಧ್ಯಕ್ಷರು, ಗಮಕ ಕಲಾ ಪರಿಷತ್ತು
ವಿಷಯ : ಕುಮಾರವ್ಯಾಸ ಭಾರತ'

**ದಿನಾಂಕ ೧೬-೦೨-೨೦೨೫ ಭಾನುವಾರ**
**ಬೆಳಗ್ಗೆ ೧೦.೩೦ ಗಂಟೆಯಿಂದ**
ಸಂಗೀತ ಸರಸ್ವತಿ ವಿದ್ವಾನ್ ಪಿಟೀಲು ಚೌಡಯ್ಯ ದತ್ತಿ– ಪಿಟೀಲು ವಾದನ ಮತ್ತು ಶಾಸ್ತ್ರೀಯ ಗಾಯನ ಸ್ಪರ್ಧೆ

**ದಿನಾಂಕ ೨೦-೦೨-೨೦೨೫ ಗುರುವಾರ**
**ಸಂಜೆ ೦೫.೦೦ ಗಂಟೆಗೆ**
ಆ.ನೇ. ಉಪಾಧ್ಯೆ, ಡಿ.ಎಲ್.ಎನ್., ಎಂ.ಜಿ.ನಂಜುಂಡಾರಾಧ್ಯ, ಸೋಸಲೆ ಅಯ್ಯಾಶಾಸ್ತ್ರಿ ದತ್ತಿ
ವಿಷಯ: ಡಿ.ಎಲ್.ಎನ್. ಅವರ ಸಂಶೋಧನಾ ಲೇಖನಗಳು
ಉಪನ್ಯಾಸಕರು: ಡಾ. ಸತ್ಯಮಂಗಲ ಮಹಾದೇವ
ಸಹ ಪ್ರಾಧ್ಯಾಪಕರು, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು

**ದಿನಾಂಕ ೨೨-೦೨-೨೦೨೫ ಶನಿವಾರ**
**ಸಂಜೆ ೦೫.೦೦ ಗಂಟೆಗೆ**
ಎಲ್. ನಾಗಮಣಿ ಲಕ್ಷ್ಮೀನಾರಾಯಣ ದತ್ತಿ (ಸಂಗೀತ)
ಸುಗಮ ಸಂಗೀತ ನಡೆಸಿಕೊಡುವವರು : ಕುಮಾರಿ ಚಂದನ ಎಂ. ಮತ್ತು ತಂಡ

**ದಿನಾಂಕ ೨೪-೦೨-೨೦೨೫ ಸೋಮವಾರ**
**ಸಂಜೆ ೦೫.೦೦ ಗಂಟೆಗೆ**
ಕೋಚೆ ನೆನಪಿನ ದತ್ತಿ ಉಪನ್ಯಾಸ
ವಿಷಯ: ಕೋಚೆ ಅವರ 'ನ್ಯಾಯಾಧೀಶರ ನೆನಪುಗಳು'
ಉಪನ್ಯಾಸಕರು: ಶ್ರೀ ನಂಜಪ್ಪ ಕಾಳೇಗೌಡ, ಪ್ರಸಿದ್ಧ ವಕೀಲರು
ಮಾಜಿ ಅಧ್ಯಕ್ಷರು, ಬೆಂಗಳೂರು ವಕೀಲರ ಸಾಹಿತ್ಯಕೂಟ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 and printed by Keerthi Printers, Girinagar, Bengaluru - 560085 & published at BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩